ಅ) ನೀರಾವರಿ ಪಂಪುಸೆಟ್ಟುಗಳ ವಿದ್ಯುದ್ದೀಕರಣದ ವಿಷಯದಲ್ಲಿ ಮಂಡಳಿಯ ನಿಷ್ಕ್ರಿಯ ಆಗಿರುವುದಿಲ್ಲ. ಮುಖ್ಯವಾಗಿ ಎ.ಸಿ.ಎಸ್.ಆರ್. ಕಂಡಕ್ಟರ್‌ಗಳನ್ನು ಸರಬರಾಜು ಮಾಡುವಲ್ಲಿ ಉಂಟಾದ ತೊಂದರೆಗಳಿಂದಾಗಿ ವಿದ್ಯುದ್ದೀಕರಣ ಕಾರ್ಯದಲ್ಲಿ ಸ್ವಲ್ಪ ಹಿನ್ನಡೆ ಉಂಟಾಗಿದೆ. ಈಗ ಎ.ಸಿ.ಎಸ್.ಆರ್. ಕಂಡಕ್ಟರ್‌ಗಳ ಸರಬರಾಜಿನಲ್ಲಿ ಸುಧಾರಣೆ ಉಂಟಾಗಿದೆ. ಅಲ್ಲದೇ ಸಾರ್ವಜನಿಕ ಹಿತದೃಷ್ಟಿಯಿಂದ ಕುಡಿಯುವ ನೀರಿನ ಯೋಜನೆಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವುದು ಮತ್ತು ಸರ್ಕಾರದ ಮಹತ್ತರ ಯೋಜನೆಯಾದ ಗಂಗಾ ಕಲ್ಯಾಣ ಯೋಜನೆಯಡಿ ನೀರಾವರಿ ಪಂಪುಸೆಟ್ಟು ವಿದ್ಯುದ್ದೀಕರಣ ಇವುಗಳ ಬಗ್ಗೆ ಮಂಡಳಿಯು ತನ್ನ ಪೂರ್ಣ ಗಮನವನ್ನು ಹರಿಸುತ್ತಿರುವುದರಿಂದ ವೈಯಕ್ತಿಕ ನೀರಾವರಿ ಪಂಪುಸೆಟ್ಟುಗಳ ವಿದ್ಯುದ್ದೀಕರಣದಲ್ಲಿ ಸ್ವಲ್ಪ ಹಿನ್ನಡೆ ಉಂಟಾಗಲು ಕಾರಣವಾಗಿದೆ. ಚಿಕ್ಕನಾಯಕನಹಳ್ಳಿ ಬಳಿ ತಾಲ್ಲೂಕು ಆಗಿರುವುದರಿಂದ ನೀರಾವರಿ ಪಂಪುಸೆಟ್ಟುಗಳ ವಿದ್ಯುದ್ದೀಕರಣದ ಬಗ್ಗೆ ನಿರ್ಬಂಧವಿರುವುದಿಲ್ಲ. ಆದರೆ ಮಂಡಳಿಯ ನಿಯಮಗಳ ಪ್ರಕಾರ ನೀರಾವರಿ ಪಂಪುಸೆಟ್ಟುಗಳಿಗೆ ಆದ್ಯತಾ ಪಟ್ಟಿಯಲ್ಲಿನ ಹಿರಿತನದ ಮೇರೆಗೆ ವಿದ್ಯುತ್ ಸಂಪರ್ಕ ಕಲ್ಪಿಸುವುದು ಅನಿವಾರ್ಯವಾಗಿದೆ.

ಕುಣಿಗಲ್ ಕೆರೆಗೆ ನೀರು ಬಿಡುವ ಯೋಜನೆ.

1252 - ಶ್ರೀ ಎಸ್.ಪಿ. ಮುದ್ದಹನುಮೇಗೌಡ (ಕುಣಿಗಲ್) : ಮಾನ್ಯ ಬೃಹತ್ ನೀರಾವರಿ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೇಮಾವತಿ ನಾಲೆಯ ಮೂಲಕ ಕುಣಿಗಲ್ ಕೆರೆಗೆ ನೀರು ಬಿಡುವ ಯೋಜನೆ ಸರ್ಕಾರದ ಮುಂದಿದೆಯೇ?

ಆ) ಹಾಗಿದ್ದಲ್ಲಿ ಸದರಿ ಕೆರೆಗೆ ನೀರನ್ನು ಯಾವಾಗ ಬಿಡಲಾಗುವುದು?

ಶ್ರೀ ಕೆ.ಎನ್. ನಾಗೇಗೌಡ (ಭಾರೀ ನೀರಾವರಿ ಸಚಿವರು) :

ಅ) ಇಲ್ಲ.

ಆ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ರಾಜ್ಯದ ಸಣ್ಣ ಕೆರೆಗಳ ಅಭಿವೃದ್ಧಿ.

1253 - ಶ್ರೀ ಎಸ್.ಕೆ. ಮುದ್ದಹನುಮೇಗೌಡ (ಕುಣಿಗಲ್) : ಮಾನ್ಯ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಸಣ್ಣ ನೀರಾವರಿ ಇಲಾಖೆಗೆ ಒಳಪಡುವ ಕೆರೆಗಳೆಷ್ಟು?

ಆ) ರಾಜ್ಯದ ಸುಮಾರು ಎಷ್ಟು ರೈತರು ಈ ಕೆರೆಗಳ ನೀರಿಗಾಗಿ ಅವಲಂಭಿಸಿದ್ದಾರೆ?

ಇ) ಈ ಕೆರೆಗಳ ಅಭಿವೃದ್ಧಿಗೆ ಇಲಾಖೆಯು ಕೈಗೊಂಡಿರುವ ಕಾರ್ಯಕ್ರಮಗಳೇನು?